# ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.

**C.C. 1634-22**

ಪಿ.ಡಬ್ಲ್ಯೂ-7

ಸಿ.ಡಬ್ಲ್ಯೂ-**11**

ಸಾಕ್ಷಿದಾರರ ಹೆಸರು : ಸುನಿಲ್ ಮಾದನಕೇರಿ

ತಂದೆ ಹೆಸರು : ಬಾಬುರಾವ್

ವಯಸ್ಸು : 52 ವರ್ಷ

ಉದ್ಯೋಗ : ಕೂಲಿ

ವಾಸಸ್ಥಳ : ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 19.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಅಪಘಾತವನ್ನು ನೋಡಿಲ್ಲ, ಆರೋಪಿಯನ್ನು ನೋಡಿಲ್ಲ, ಅಪಘಾತವನ್ನು ನೋಡಿದ್ದೇನೆಂದು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು. ಅವರು ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)*

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ದಿಃ 22.2.2022 ರಂದು ಸರ್ವೋದಯ ಸರ್ಕಲ್ ಬಳಿ ಪುಟ್‌ಪಾತ್ ಪಕ್ಕದಲ್ಲಿ ನಾನು ನನ್ನ ಡಬ್ಬಿ ಚಹಾ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಗ, ರಾತ್ರಿ 7 ಗಂಟೆ ಸುಮಾರಿಗೆ ಒಬ್ಬ ಬೈಕ್ ಸವಾರಳು ತನ್ನ ಹಿಂದೆ ಇನ್ನೊಬ್ಬಳನ್ನು ಕೂಡ್ರಿಸಿಕೊಂಡು ಕೆ ಹೆಚ್ ಪಾಟೀಲ ರಸ್ತೆ ಕಡೆಯಿಂದ ಸರ್ವೋದಯ ಸರ್ಕಲ್ ಮೂಲಕ ಕುಸುಗಲ್ ರಸ್ತೆ ಕಡೆಗೆ ಹೊರಟಿದ್ದಳು, ಆಗ ಅವಳ ಹಿಂದಿನಿಂದ ಒಂದು ಕಾರ್ ನಂಃ ಕೆಎ-25 ಜಡ್ 8317 ನೇದ್ದನ್ನು ಆರೋಪಿ ಅತಿ ವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ನಡೆಸಿಕೊಂಡು ಬಂದು, ಆ ಬೈಕ್ ಗೆ ಡಿಕ್ಕಿಪಡಿಸಿದ ಅಂದರೆ ಸರಿಯಲ್ಲ. ಆ ಕಾರಣ ಆ ಬೈಕ ಸವಾರಳು ಮತ್ತು ಹಿಂದೆ ಕುಳಿತ ವ್ಯಕ್ತಿಯು ಗಾಯಗೊಂಡರು ಅಂದರೆ ಸರಿಯಲ್ಲ.

ಆ ನಂತರ ಹಿಂದೆ ಕುಳಿತ ವ್ಯಕ್ತಿ ನಿರ್ಮಲಾ ರವರು ಮರಣ ಹೊಂದಿದರು ಎಂದು ಗೊತ್ತಾಯಿತು ಅಂದರೆಸ ರಿಯಲ್ಲ, ಆ ಬಗ್ಗೆ ಈಗ ಓದಿ ಹೇಳಲಾದ ಮೇಲಿನ ವಿಳಾಸ --- ಗುರುತಿಸುತ್ತೇನೆ ಅಂತಾ ನಿಪಿ.14 ರ ಪ್ರಕಾರ ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

ದಿಃ 24.2.2022 ರಂದು ನನ್ನನ್ನು ಪುನಃ ಪೋಲಿಸ ಠಾಣೆಗೆ ಕರೆಸಿದ್ದರು, ಪೋಲಿಸರ ವಶದಲ್ಲಿ ಆರೋಪಿ ಇದ್ದ, ಆತನನ್ನು ನೋಡಿ ಗುರುತಿಸಿ, ಈಗ ಓದಿ ಹೇಳಲಾದ ನಾನು --- ಗುರುತಿಸುತ್ತೇನೆಂದು ನಿಪಿ.15 ರ ಪ್ರಕಾರ ಪುರವಣಿ ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

ನಾನು ಆ ಅಪಘಾತ ನೋಡಿದ್ದರೂ ಸಹಿತ ನೋಡಿಲ್ಲವೆಂದು ಮತ್ತು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಏನೂ ಇಲ್ಲವೆಂದು ಹೇಳಿದ್ದಾರೆ.**

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.

# ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.

**C.C. 1634-22**

ಪಿ.ಡಬ್ಲ್ಯೂ-8
ಸಿ.ಡಬ್ಲ್ಯೂ-13

ಸಾಕ್ಷಿದಾರರ ಹೆಸರು : ವಿಜಯ ದೊಡಮನಿ

ತಂದೆ ಹೆಸರು : ದೇವರಾಜ

ವಯಸ್ಸು : 28 ವರ್ಷ

ಉದ್ಯೋಗ : ಬೇಕರಿ ಕೆಲಸ

ವಾಸಸ್ಥಳ : ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 19.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಕೇಶ್ವಾಪೂರ ಹತ್ತಿರ ಬೇಕರಿ ನಡೆಸುತ್ತೇನೆ. ನಾನು ಅಪಘಾತವನ್ನು ನೋಡಿಲ್ಲ, ಆರೋಪಿಯನ್ನು ನೋಡಿಲ್ಲ, ಅಪಘಾತವನ್ನು ನೋಡಿದ್ದೇನೆಂದು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು. ಅವರು ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)*

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ದಿಃ 22.2.2022 ರಂದು ಸರ್ವೋದಯ ಸರ್ಕಲ್ ಬಳಿ ಪುಟ್‌ಪಾತ್ ಪಕ್ಕದಲ್ಲಿ ನಾನು ನನ್ನ ಬೇಕರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಗ, ರಾತ್ರಿ 7 ಗಂಟೆ ಸುಮಾರಿಗೆ ಒಬ್ಬ ಬೈಕ್ ಸವಾರಳು ತನ್ನ ಹಿಂದೆ ಇನ್ನೊಬ್ಬಳನ್ನು ಕೂಡ್ರಿಸಿಕೊಂಡು ಕೆ ಹೆಚ್ ಪಾಟೀಲ ರಸ್ತೆ ಕಡೆಯಿಂದ ಸರ್ವೋದಯ ಸರ್ಕಲ್ ಮೂಲಕ ಕುಸುಗಲ್ ರಸ್ತೆ ಕಡೆಗೆ ಹೊರಟಿದ್ದಳು, ಆಗ ಅವಳ ಹಿಂದಿನಿಂದ ಒಂದು ಕಾರ್ ನಂಃ ಕೆಎ-25 ಜಡ್ 8317 ನೇದ್ದನ್ನು ಆರೋಪಿ ಅತಿ ವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ನಡೆಸಿಕೊಂಡು ಬಂದು, ಆ ಬೈಕ್ ಗೆ ಡಿಕ್ಕಿಪಡಿಸಿದ ಅಂದರೆ ಸರಿಯಲ್ಲ. ಆ ಕಾರಣ ಆ ಬೈಕ ಸವಾರಳು ಮತ್ತು ಹಿಂದೆ ಕುಳಿತ ವ್ಯಕ್ತಿಯು ಗಾಯಗೊಂಡರು ಅಂದರೆ ಸರಿಯಲ್ಲ.

ಆ ನಂತರ ಹಿಂದೆ ಕುಳಿತ ವ್ಯಕ್ತಿ ನಿರ್ಮಲಾ ರವರು ಮರಣ ಹೊಂದಿದರು ಎಂದು ಗೊತ್ತಾಯಿತು ಅಂದರೆಸ ರಿಯಲ್ಲ, ಆ ಬಗ್ಗೆ ಈಗ ಓದಿ ಹೇಳಲಾದ ಮೇಲಿನ ವಿಳಾಸ --- ಗುರುತಿಸುತ್ತೇನೆ ಅಂತಾ ನಿಪಿ.16 ರ ಪ್ರಕಾರ ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

ದಿಃ 24.2.2022 ರಂದು ನನ್ನನ್ನು ಪುನಃ ಪೋಲಿಸ ಠಾಣೆಗೆ ಕರೆಸಿದ್ದರು, ಪೋಲಿಸರ ವಶದಲ್ಲಿ ಆರೋಪಿ ಇದ್ದ, ಆತನನ್ನು ನೋಡಿ ಗುರುತಿಸಿ, ಈಗ ಓದಿ ಹೇಳಲಾದ ನಾನು --- ಗುರುತಿಸುತ್ತೇನೆಂದು ನಿಪಿ.17 ರ ಪ್ರಕಾರ ಪುರವಣಿ ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

ನಾನು ಆ ಅಪಘಾತ ನೋಡಿದ್ದರೂ ಸಹಿತ ನೋಡಿಲ್ಲವೆಂದು ಮತ್ತು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಏನೂ ಇಲ್ಲವೆಂದು ಹೇಳಿದ್ದಾರೆ.**

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.